

# ಭೂಮಿಯ ಜ್ವರ ಏರಿದ ವರ್ಷ

1

ಭೂಮಿಯ ಕುದಿಜ್ವರ ಮತ್ತಷ್ಟು ಏರಿಕೆಯಾದುದು; ಈ ತಾಪಕ್ಕೆ ವಿಜ್ಞಾನಿಗಳು 'ಬಿಸಿ ಪ್ರಳಯ' ಎಂದು ನಾಮಕರಣ ಮಾಡಿದ್ದು 2019ರ ಉದ್ದಕ್ಕೂ ಸುದ್ದಿಯಲ್ಲಿದ್ದ ಹಾಗೂ ಮುಂದಿನ ವರ್ಷಕ್ಕೂ ಮುಂದುವರೆಯುವ ಸಂಗತಿ. ಕಳೆದ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಜಗತ್ತಿನ ಹಲವೆಡೆ ದೊಡ್ಡ ನಿಸರ್ಗ ಪ್ರಕೋಪಗಳು ಸಂಭವಿಸಿವೆ.

ಭೂಮಿಯ 'ಶ್ವಾಸಕೋಶ'ವೆಂದೇ ಪರಿಗಣಿಸಲಾಗುವ ಅಮೆಜಾನ್ ಮಳೆಕಾಡು ಧಗಧಗ ಎಂದು ಉರಿದಿದೆ. ಜಗತ್ತಿಗೆ ಬೇಕಾದ ಆಮ್ಲಜನಕದಲ್ಲಿ ಸಿಂಹಪಾಲನ್ನು (ಶೇ. 20ರಷ್ಟು) ಕೊಡುವ, ಲಕ್ಷಾಂತರ ಟನ್ ಇಂಗಾಲವನ್ನು ಹೀರುವ ಈ 'ಶ್ವಾಸಕೋಶ'ದ 65 ಸಾವಿರ ತಾಣಗಳಿಗೆ ಗಾಸಿಯಾಗಿದೆ.

ಯೂರೋಪ್ ಹಾಗೂ ಆಸ್ಟ್ರೇಲಿಯಾದ ನೂರಾರು ತಾಣಗಳಲ್ಲಿ ಇದೇ ಅವಧಿಯಲ್ಲಿ ಬೆಂಕಿ ಬಿದ್ದಿದೆ. ಅಷ್ಟೇ ಏಕೆ, ನಮ್ಮ ಬಂಡೀಪುರದ ಕಾಡಿನಲ್ಲೂ ಬೆಂಕಿ ಕಾಣಿಸಿಕೊಂಡು ಸಾವಿರಾರು ಎಕರೆ ಅರಣ್ಯ ಪ್ರದೇಶ ಸುಟ್ಟು ಬೂದಿಯಾಗಿದೆ. ಕೃಷಿತ್ಯಾಜ್ಯದ ದಹನದಿಂದ ದೆಹಲಿಯ ವಾತಾವರಣದಲ್ಲಿ ಹೊಂಜು ಆವರಿಸಿ, ಎಲ್ಲೆಡೆ ಕೊಳೆಗಾಳಿ ತುಂಬಿ, ಶುದ್ಧ ಗಾಳಿಯನ್ನು ಮಾರುವಂತಹ ಅಂಗಡಿಯನ್ನೂ ತೆರೆಯುವಂತಾಗಿದೆ.

ಭಾರತದಲ್ಲೂ ಹವಾಮಾನದ ಋತುಚಕ್ರದಲ್ಲಿ ಭಾರೀ ಬದಲಾವಣೆ ಆಗಿದೆ. ನಮ್ಮ ರಾಜ್ಯದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಈ ಸಲ ಡಿಸೆಂಬರ್‌ವರೆಗೆ ಮಳೆಗಾಲ ವಿಸ್ತರಣೆಗೊಂಡಿದೆ. ಕಳೆದ ವರ್ಷದ ಮಳೆಗಾಲದಲ್ಲಿ ಮೈದುಂಬಿಕೊಂಡಿದ್ದ ನೇತ್ರಾವತಿ ನದಿ ಈ ವರ್ಷ ಮಾರ್ಚ್‌ನಲ್ಲಿ ನೀರಿಲ್ಲದೆ ಬತ್ತಿ ಹೋಗಿದ್ದು ನೆನಪಿದೆಯಲ್ಲ? ಇತಿಹಾಸದಲ್ಲಿ ಇದೇ ಮೊದಲ ಸಲ ಧರ್ಮಸ್ಥಳಕ್ಕೆ ಭಕ್ತರು ಬರುವುದು ಬೇಡ ಎಂದು ಕೇಳಿಕೊಳ್ಳುವ ಪ್ರಮೇಯ ಬಂದೊದಗಿತ್ತು. ಅದಾಗಿ ಎರಡೇ ತಿಂಗಳಲ್ಲಿ ಮಹಾಮಳೆ ಸುರಿದು ಅದೇ ನದಿಯ ತೀರದಲ್ಲಿ ಪ್ರವಾಹದ ಪರಿಸ್ಥಿತಿ! ಭೀಕರ ಬರ, ಹುಚ್ಚುಮಳೆ, ಅಗ್ನಿಕುಂಡವಾದ ಕಾಡು, ಕುಸಿದ ಗುಡ್ಡ – ಇವುಗಳೆಲ್ಲ ಹವಾಮಾನ ಬದಲಾವಣೆಯಿಂದ ನಾವು ಈ ವರ್ಷವೂ

# ಇತಿಹಾಸ ಪುಟ ಸೇರಿದ ಕಣಿವೆ ರಾಜ್ಯ



2

ಜಮ್ಮು ಮತ್ತು ಕಾಶ್ಮೀರಕ್ಕೆ ಕಲ್ಪಿಸಿದ್ದ ವಿಶೇಷ ಸ್ಥಾನಮಾನವನ್ನು (ಸಂವಿಧಾನದ 370ನೇ ವಿಧಿ) ರದ್ದುಗೊಳಿಸಿರುವುದು ಈ ವರ್ಷದ ಅತ್ಯಂತ ಪ್ರಮುಖ ರಾಜಕೀಯ ವಿದ್ಯಮಾನ. ಆ ರಾಜ್ಯವು ಈಗ ಇತಿಹಾಸದ ಪುಟವನ್ನು ಸೇರಿದ್ದು, ಜಮ್ಮು–ಕಾಶ್ಮೀರ ಮತ್ತು ಲಡಾಖ್ ಎಂಬ ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿ ರೂಪಾಂತರಗೊಂಡಿದೆ.

ಇಡೀ ಕಣಿವೆ ರಾಜ್ಯಕ್ಕೆ ಹೊರಜಗತ್ತಿನ ಸಂಪರ್ಕವೇ ಇಲ್ಲದಂತೆ ದಿಗ್ಬಂಧನ ವಿಧಿಸಿ, ಅಲ್ಲಿನ ರಾಜಕೀಯ ನಾಯಕರನ್ನು ಗೃಹಬಂಧನದಲ್ಲಿ ಇರಿಸಿ, ಏನಾಗಲಿದೆ ಎಂಬುದು ಜನರ ಅರಿವಿಗೆ ಬಾರದಂತೆ ಕೇಂದ್ರದ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಈ ತೀರ್ಮಾನ ಕೈಗೊಂಡಿರುವುದು ಭಾರಿ ಚರ್ಚೆಗೆ ಕಾರಣವಾಗಿದೆ. ಮೊಬೈಲ್ ಹಾಗೂ ಇಂಟರ್ನೆಟ್ ಸಂಪರ್ಕವನ್ನು ಕೆಲವು ತಿಂಗಳುಗಳ ಬಳಿಕ ಮರಳಿ ಒದಗಿಸಿದರೂ ವರ್ಷಾಂತ್ಯದವರೆಗೂ